## ಕರ್ನಾಟಕ ಸರ್ಕಾರ

ಸಂಖ್ಯೆ:ಮಮಅಇ/ಮ.ರ.ಆ./ಪ.ಪ್ರ./2015-16

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:05-05-2015

## ಪ್ರಕಟಣೆ ವಿವರ

ಭಾರತ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಅಥವಾ ಮಕ್ಕಳ ವಿರುದ್ಧ ಅಪಾದನೆಗಳ ತ್ವರಿತ ವಿಲೇವಾರಿಗೆ ಮಕ್ಕಳ ನ್ಯಾಯಾಲಯವನ್ನು ಸ್ಥಾಪಿಸಲು ಮಕ್ಕಳ ಹಕ್ಕುಗಳ ರಕ್ಷಣೆಯ ಅಧಿನಿಯಮ-2005ನ್ನು ಜಾರಿಗೆ ತಂದಿರುತ್ತದೆ. ಪ್ರಕರಣ 17(1) ರ ದಿನಾಂಕ:27.09.2007ರ ಸರ್ಕಾರಿ ಆದೇ ಶನ್ವಯ ಮಕ್ಕಳ ಹಕ್ಕುಗಳ ರಕ್ಷಣೆಯ ಆಯೋಗವನ್ನು ಕರ್ನಾಟಕ ಸರ್ಕಾರವು ಸ್ಥಾಪಿಸಿದೆ. ಆಯೋಗಕ್ಕೆ ಅಧ್ಯಕ್ಷರು ಮತ್ತು ಇಬ್ಬರು ಮಹಿಳಾ ಸದಸ್ಯರನ್ನು ಒಳಗೊಂಡಂತೆ 6 ಸದಸ್ಯರನ್ನು ರಾಜ್ಯ ಸರ್ಕಾರವು ನೇಮಿಸಬೇಕಾಗಿರುತ್ತದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರವಧಿಯು ದಿನಾಂಕ:30.06.2015ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ, ಅಧ್ಯಕ್ಷರು ಮತ್ತು ಸದಸ್ಯರಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ.

ಆಯೋಗದಲ್ಲಿ ಅಧ್ಯಕ್ಷರು/ಸದಸ್ಯರ ನೇಮಕಾತಿಯಾಗಲು ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿ ಅಸಾಧಾರಣ ಕಾರ್ಯ ನಿರ್ವಹಿಸಿರುವ ಅರ್ಹತೆ ಹೊಂದಿರಬೇಕಾಗುತ್ತದೆ ಹಾಗೂ ಅರ್ಜಿದಾರರು ಈ ಕೆಳಕಂಡ ಕ್ಷೇತ್ರಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹಾಗೂ ಪ್ರಖ್ಯಾತಿ ಹೊಂದಿರಬೇಕು.

- ಶಿಕ್ಷಣ
- ಮಕ್ಕಳ ಆರೋಗ್ಯ, ರಕ್ಷಣೆ ಹಾಗೂ ಅಭಿವೃದ್ಧಿ
- ಸಂಕಷ್ಟಕ್ಕೊಳಗಾದ ಹಾಗೂ ವಿಕಲಚೇತನ ಮಕ್ಕಳ ಬಗ್ಗೆ
- ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ
- ಮಕ್ಕಳ ಮನಃಶಾಸ್ತ್ರ ಅಥವಾ ಸಮಾಜ ಶಾಸ್ತ್ರ
- ಮಕ್ಕಳ ಕಾಯ್ದೆ ಕಾನೂನುಗಳು

ಅಧ್ಯಕ್ಷರ ಮತ್ತು ಸದಸ್ಯರ ಸೇವೆಯು 3 ವರ್ಷ ಅವಧಿ ಇರುವ ಕಾರಣ ಅಧ್ಯಕ್ಷರ ಹುದ್ದೆಗೆ ನೇಮಕಾತಿಯಾಗಲು 62 ವರ್ಷದ ಒಳಗಿನ ವಯೋಮಿತಿಯವರಾಗಿರಬೇಕು ಹಾಗೂ ಸದಸ್ಯರಾಗಿ ನೇಮಕಾತಿಯಾಗಲು 57 ವರ್ಷದ ಒಳಗಿನ ವಯೋಮಿತಿಯವರಾಗಿರಬೇಕು. ಅಧ್ಯಕ್ಷರು ಹಾಗೂ ಸದಸ್ಯರಾಗಿ ಕಾರ್ಯ ನಿರ್ವಹಿಸಲು ಆಸಕ್ತಿಯುಳ್ಳ ವ್ಯಕ್ತಿಗಳು ಈ ಕೆಳಕಂಡ ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ನೊಂದಾಯಿತ ಅಂಚೆಯ ಮೂಲಕ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಂಬೇಡ್ಕರ್ ವೀದಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-5600 001. ಇವರಿಗೆ ಸಲ್ಲಿಸಬಹುದಾಗಿದೆ.

ಹೆಸರು, ತಂದೆ/ತಾಯಿ ಹೆಸರು, ಜನ್ಮ ದಿನಾಂಕ ಮತ್ತು ವಯಸ್ಸು, ಇತ್ತೀಚಿನ ದಿನದ ಪಾಸ್ ಪೋರ್ಟ್ ಗಾತ್ರದ ಭಾವಚಿತ್ರ, ಲಿಂಗ (ಗಂಡು/ಹೆಣ್ಣು), ಜಾತಿ, ರಾಷ್ಟ್ರೀಯತೆ, ಇತ್ತೀಚಿನ ವಿಳಾಸ, ಸಂಪರ್ಕಿಸಲು ದೂರವಾಣಿ ಸಂ:(ಎ)ಸ್ಥಿರ ದೂರವಾಣಿ (ಬಿ) ಮೊಬೈಲ್ (ಸಿ)ಇ-ಮೇಲ್ ವಿಳಾಸ, ವಿದ್ಯಾರ್ಹತೆ, ಶ್ರಮಿಸಿದ ಭಾಷಾ ಜ್ಞಾನ (ಓದಲು, ಬರೆಯಲು & ಮಾತನಾಡಲು), ಕಾರ್ಯ ಕ್ಷೇತ್ರದ ಅನುಭವ, ಕ್ರಿಮಿನಲ್ ಅಪರಾಧದ ದಾಖಲು ಇದೆಯೇ?, ಇತರೆ ಚಟುವಟಿಕೆಗಳ ವಿವರ, ಇತರೆ ಸಂಘ ಸಂಸ್ಥೆಗಳ ಸದಸ್ಯತ್ವ, ಘೋಷಣೆ, ಸಾಧನೆಗಳು/ಕೆಲಸ ನಿರ್ವಹಿಸಿದ ಅನುಭವ (ಒಂದು ಪುಟಕ್ಕೆ ಮೀರದಂತೆ)

ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಂಗಳೂರು.

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
3. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು.
4. ಕಛೇರಿ ಪ್ರತಿ.

# ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿ ಸಂಬಂಧದ ಅರ್ಜಿ ನಮೂನೆ:

ಗೆ

ನಿರ್ದೇಶಕರು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬಹುಮಹಡಿಗಳ ಕಟ್ಟಡ, 1ನೇ ಮಹಡಿ,
ಬೆಂಗಳೂರು-560001.

| ಕ್ರ.ಸಂ | ವಿವರ | |
|---|---|---|
| 1. | ಅರ್ಜಿದಾರರ ಹೆಸರು (ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸುವುದು) | |
| 2. | ಇತ್ತೀಚಿನ ವಿಳಾಸ,<br>ಸಂಪರ್ಕಿಸಲು ದೂರವಾಣಿ ಸಂಖ್ಯೆ:<br>(ಎ)ಸ್ಥಿರ ದೂರವಾಣಿ<br>(ಬಿ) ಮೊಬೈಲ್<br>(ಸಿ)ಇ-ಮೇಲ್ ವಿಳಾಸ, | |
| 3. | ತಂದೆ/ತಾಯಿ/ಗಂಡ ಹೆಸರು | |
| 4. | ಜನ್ಮ ದಿನಾಂಕ/ ವಯಸ್ಸು (ದೃಢೀಕೃತ ಪ್ರತಿ ಲಗತ್ತಿಸುವುದು) | |
| 5. | ಲಿಂಗ (ಗಂಡು/ಹೆಣ್ಣು) | |
| 6. | ಜಾತಿ | |
| 7. | ರಾಷ್ಟ್ರೀಯತೆ | |
| 8. | ವಿದ್ಯಾರ್ಹತೆ( ಸ್ವಯಂ ದೃಢೀಕೃತ ಪ್ರತಿ ಲಗತ್ತಿಸುವುದು) | |
| 9. | ಭಾಷಾ ಜ್ಞಾನ<br>1. ಓದಲು<br>2. ಬರೆಯಲು<br>3. ಮಾತನಾಡಲು | |
| 10. | ಕಾರ್ಯ ಕ್ಷೇತ್ರದಲ್ಲಿನ ಅನುಭವ, | |
| 11. | ಕ್ರಿಮಿನಲ್ ಅಪರಾಧ ಇಲ್ಲದಿರುವ ಬಗ್ಗೆ ಸ್ವಯಂ ಘೋಷಣೆ | |
| 12. | ಇತರೆ ಚಟುವಟಿಕೆಗಳ ವಿವರ, | |

| | | |
|---|---|---|
| 13. | ಇತರೆ ಸಂಘ ಸಂಸ್ಥೆಗಳ ಸದಸ್ಯತ್ವ (ಒಂದು ಪುಟಕ್ಕೆ ಮೀರದಂತೆ ಪ್ರತ್ಯೇಕವಾಗಿ ಲಗತ್ತಿಸುವುದು.) | |
| 14. | ಸಾಧನೆಗಳು/ಕೆಲಸ ನಿರ್ವಹಿಸಿದ ಅನುಭವ (ಒಂದು ಪುಟಕ್ಕೆ ಮೀರದಂತೆ ಪ್ರತ್ಯೇಕವಾಗಿ ಲಗತ್ತಿಸುವುದು.) | |

ಮೇಲ್ಕಾಣಿಸಿದ ಎಲ್ಲಾ ಮಾಹಿತಿಗಳು ಸರಿಯಿದೆ ಎಂದು ದೃಢೀಕರಿಸುತ್ತೇನೆ.

ಅಭ್ಯರ್ಥಿಯ ಸಹಿ

ಸ್ಥಳ:

ದಿನಾಂಕ: